ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

ಶುಕ್ರವಾರ, ೨ನೇ ಸೆಪ್ಟೆಂಬರ್ ೧೯೯೪ ಸಾಯನ ಸೌರ ಭಾದ್ರಪದ (ಶಕ)
Friday, 2nd September 1994 Sayana Sowra Bhadrapada (S.E.)

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ : ೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : ಉಪಾಧ್ಯಕ್ಷರು (ಶ್ರೀ ವಿ. ಎಸ್. ಕೌಜಲಗಿ) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಮಾನ್ಯ ಅಧ್ಯಕ್ಷರು : ಬನ್ನಿಕೋಡ್‌ರವರೇ, ಮಂತ್ರಿಗಳು ತಮ್ಮ ಪ್ರಶ್ನೆ ಸಂಖ್ಯೆ : 116 (407) ಕ್ಕೆ ಕಾಲವಾಕಾಶ ಕೇಳಿದ್ದಾರೆ.

ಶ್ರೀ ಬಿ.ಎಚ್. ಬನ್ನಿಕೋಡ್ :- ಮಾನ್ಯ ಅಧಕ್ಷರೆ, ನಾನು ಕೇಳಿರತಕ್ಕಂಥಹ ಪ್ರಶ್ನೆ ರಾಜ್ಯದಲ್ಲಿ ಮಹಾಪೂರದಿಂದ ಸತತವಾಗಿ ಗ್ರಾಮಗಳು ಮುಳುಗಡೆಯಾಗುತ್ತಿವೆ, ಇವುಗಳನ್ನು ಸ್ಥಳಾಂತರಿಸುವುದಕ್ಕೆ ಏನು ವ್ಯವಸ್ಥೆ ಮಾಡಿದಿರಿ ಮತ್ತು ಇದಕ್ಕೆ ಆಯವ್ಯಯದಲ್ಲಿ ಹಣ ಒದಗಿಸಿದ್ದೀರಾ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಈ ಪ್ರಶ್ನೆಗೆ ಮಂತ್ರಿಗಳು ಸಮಯ ಕೇಳುತ್ತಾರೆ ಎಂದರೆ ಸರ್ಕಾರಕ್ಕೆ ಈ ವಿಷಯದ ಬಗ್ಗೆ ಎಷ್ಟು ಕಳಕಳಿ ಇದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಧರ್ಮಸಿಂಗ್ :- ನಿಮಗೆ ಸ್ಪಷ್ಟವಾದ ಉತ್ತರ ಕೊಡಬೇಕು ಎಂದು ಇದ್ದೇವೆ. ಇದನ್ನು ತಡೆಹಿಡಿಯಾಲಾದ ಪ್ರಶ್ನೆಗಳ ಜೊತೆಯಲ್ಲಿ ಸೋಮವಾರಕ್ಕೆ ಹಾಕಿ. ಅಥವಾ 7ನೇ ತಾರೀಖಿನ ಒಳಗೆ ಕೊಡುತ್ತೇವೆ. ಏಕೆಂದರೆ ನಿಮಗೆ ಸ್ಪಷ್ಟವಾದ ಉತ್ತರ ಕೊಡಬೇಕು ಎಂಬ ಉದ್ದೇಶದಿಂದ ಈ ರೀತಿ ಮಾಡಿದ್ದೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್ :- ಇದಕ್ಕೆ ಆಯವ್ಯಯದಲ್ಲಿ ಹಣ ಒದಗಿಸಿಲ್ಲ ಅದಕ್ಕಾಗಿ ಇವರು ಈ ರೀತಿ ಹೇಳುತ್ತಿದ್ದಾರೆ.

ಅಧ್ಯಕ್ಷರು : ಈ ಪ್ರಶ್ನೆಯನ್ನು ಸೋಮವಾರ ತೆಗೆದುಕೊಳ್ಳೋಣ.